ಇ) ಸರ್ಕಾರ ಗಮನಕ್ಕೆ ಬಂದಿರುವುದಿಲ್ಲ.

ಈ) ಇಂತಹ ಅವಶ್ಯಕತೆ ಕಂಡು ಬರುವುದಿಲ್ಲ ಆಯಾ ಕಾರ್ಖಾನೆಯವರೇ, ತೂಕದ ಯಂತ್ರ ಅಳವಡಿಸಿಕೊಳ್ಳಬೇಕಾಗಿರುತ್ತದೆ.

ರೇಷ್ಮೆ ವಿನಿಮಯ ಕೇಂದ್ರ ರದ್ದು

596(1095) ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ವಿನಿಮಯ ಕೇಂದ್ರ ಹಾಗೂ ಜಾರಿ ವಿಭಾಗಗಳನ್ನು ರದ್ದುಗೊಳಿಸಿ ಸರ್ಕಾರ ಆದೇಶ ಹೊರಡಿಸಿರುವುದು ನಿಜವೇ;

ಆ) ರೇಷ್ಮೆ ಗೂಡಿನ ಬೆಲೆಯನ್ನು ಅರ್ಧದಷ್ಟು ಕಡಿಮೆ ಮಾಡಿರುವುದಕ್ಕೆ ಇದು ಒಂದು ಕಾರಣವೇ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ) ರೇಷ್ಮೆ ವಿನಿಮಯ ಕೇಂದ್ರವನ್ನು ರದ್ದುಗೊಳಿಸಿಲ್ಲ. ಆದರೆ ಕಾಯಿದೆ ಜಾರಿ ದಳದಿಂದ ರಾಜ್ಯದ ನೇಕಾರರಿಗೆ ರೀಲರುಗಳಿಗೆ ತೊಂದರೆಯಾಗುತ್ತಿದೆ ಎಂಬ ದೂರುಗಳಿದ್ದು ಪರಿಶೀಲನೆಗಾಗಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಈ ದಳದ ಕೆಲಸ ಕಾರ್ಯಗಳನ್ನು 14.06.2002 ರಿಂದ ಪುನಃ ಆರಂಭಿಸಲಾಗಿದೆ.

ಆ) ರೇಷ್ಮೆ ಗೂಡಿನ ದರ ಕಡಿಮೆಯಾಗಲು ಕೆಳಕಂಡ ಅಂಶಗಳು ಕಾರಣವೆಂದು ಅಭಿಪ್ರಾಯ ಪಡಲಾಗಿದೆ.

1. ಚೀನಾ ದೇಶದಿಂದ ಆಮದಾಗುತ್ತಿರುವ ರೇಷ್ಮೆ

2. ಕೇಂದ್ರ ಸರ್ಕಾರವು 2001-02ನೇ ಸಾಲಿನಲ್ಲಿದ್ದ ಆಮದು ರೇಷ್ಮೆ ಮೇಲೆ ಮೂಲ ಸುಂಕ ಶೇಕಡ 35, ವಿಶೇಷ ಸುಂಕ ಶೇಕಡ 3.5 ವಿಶೇಷ ಹೆಚ್ಚುವರಿ ಸುಂಕ ಶೇಕಡ 4 ರಷ್ಟಿದ್ದದ್ದನ್ನು 2002-03ನೇ ಸಾಲಿಗೆ ಮೂಲ ಸುಂಕ ಶೇಕಡ 30 ಹಾಗೂ ವಿಶೇಷ ಹೆಚ್ಚುವರಿ ಸುಂಕ ಶೇಕಡ 5.2 ರಷ್ಟಕ್ಕೆ ಮಾರ್ಪಡಿಸಿದೆ.

3. ಬಾಂಗ್ಲಾ ದೇಶ ಹಾಗೂ ನೇಪಾಳ ದೇಶಗಳ ಮೂಲಕ ಕಳ್ಳ ಸಾಗಾಣಿಕೆಯಿಂದ ಅನಧಿಕೃತವಾಗಿ ಬರುತ್ತಿರುವ ರೇಷ್ಮೆ

ಗಣಿ ಗುತ್ತಿಗೆ ನೀಡುವ ನಿಯಮ

597(1096) ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಣಿ ಗುತ್ತಿಗೆ ನೀಡಲು ಈಗಿನ ನಿಯಮವೇನು;

ಆ) ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು ಎಷ್ಟು ಗಣಿಗಾರಿಕೆಗೆ ಲೈಸೆನ್ಸ್ ನೀಡಲಾಗಿದೆ;

ಇ) ಕಳೆದ ಸಾಲಿನಲ್ಲಿ ತೆಗೆದು ರವಾನಿಸಿದ ಕಲ್ಲಿನ ವಿವರ ಹಾಗೂ ಬಂದ ವರಮಾನದ ವಿವರ ನೀಡುವುದು;

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ಮುಖ್ಯ ಖನಿಜಗಳಿಗೆ ಭಾರತ ಸರ್ಕಾರದ ಗಣಿ ಮತ್ತು ಖನಿಜ (ಅಭಿವೃದ್ಧಿ ನಿಯಂತ್ರಣ) ಕಾಯ್ದೆ, 1957ಕ್ಕೆ ಒಳಪಟ್ಟಂತಹ ಗಣಿ ಗುತ್ತಿಗೆಯನ್ನು ನೀಡಲಾಗುತ್ತಿದೆ. ಗ್ರಾನೈಟ್ ಹಾಗೂ ಇತರೆ ಕಲ್ಲು ಗಣಿಗಳನ್ನು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ, 1994ರಂತೆ ಗುತ್ತಿಗೆಯನ್ನು ನೀಡಲಾಗುತ್ತಿದೆ.

ಆ) ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 141 ಕಲ್ಲು ಗಣಿ ಗುತ್ತಿಗೆಗಳಿಗೆ ಲೈಸೆನ್ಸ್ ನೀಡಲಾಗಿದೆ.

1.	ಕಪ್ಪು ಶಿಲೆ	-	69
2.	ಕಟ್ಟಡದ ಕಲ್ಲು	-	64
3.	ಸುಣ್ಣದ ಕಲ್ಲು	-	03
4.	ಸಾಮಾನ್ಯ ಮರಳು	-	05

ಇ) ಕಳೆದ ಸಾಲಿನಲ್ಲಿ ಈ ಕೆಳಕಂಡಂತೆ ಕಲ್ಲನ್ನು ತೆಗೆದು ರವಾನಿಸಲಾಗಿದೆ ಹಾಗೂ ವರಮಾನವು ಈ ಕೆಳಕಂಡಂತೆ ಇರುತ್ತದೆ:-

	ಖನಿಜ	ರವಾನಿಸಿದ ಪ್ರಮಾಣ	ವಸೂಲಾದ ರಾಜಧನ
1.	ಕಪ್ಪು ಶಿಲೆ	16152.188 ಘ.ಮಿ	3,23,04,376
2.	ಕಟ್ಟಡದ ಕಲ್ಲು	12504 ಮೆ. ಟನ್	1,25,040
3.	ಸುಣ್ಣದ ಕಲ್ಲು	3450 ಮೆ.ಟನ್	34,500
4.	ಸಾಮಾನ್ಯ ಮರಳು	66 ಮೆ.ಟನ್	1,650

ಜಿಂದಾಲ ಉಕ್ಕಿನ ಕಾರ್ಖಾನೆಗೆ ತೆರಿಗೆ ವಿನಾಯಿತಿ

598(824) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಂದಾಲ ಉಕ್ಕಿನ ಕಾರ್ಖಾನೆಯಲ್ಲಿ ಉತ್ಪಾದನೆ ಮಾಡದೆ ಇರುವ ಸರಕುಗಳಿಗೆ ಅಂದರೆ ಕೋಲಫೈನ್ ಮರು ಮಾರಾಟ ಮಾಡಲು ತೆರಿಗೆ ವಿನಾಯ್ತಿ ನೀಡುವ ಉದ್ದೇಶ ಸರ್ಕಾರಕ್ಕೆ ಇದೆ ಇದೆಯೇ?

ಆ) ತೆರಿಗೆ ವಿನಾಯ್ತಿ ನೀಡುವ ಉದ್ದೇಶ ಸರ್ಕಾರಕ್ಕೆ ಇದ್ದರೆ ಇದರಿಂದ ಬೊಕ್ಕಸಕ್ಕೆ ತಗಲುವ ನಷ್ಟ ಎಷ್ಟು?